## ನಿಮ್ಮೊಡನೆ

# ಮಕ್ಕಳ ಸಿನಿಮಾಗಳ ದುಸ್ಥಿತಿ

ಮಕ್ಕಳ ಸಿನಿಮಾಗಳಿಗೆ ಹೆಚ್ಚಿನ ಉತ್ತೇಜನ ಕೊಡುವ ಮಾತುಗಳು ಮತ್ತೆ ಕೇಳಿ ಬರುತ್ತಿವೆ. ಈ ಮಾತುಗಳಲ್ಲಿ ಹೊಸದೇನೂ ಇಲ್ಲ. ಮಕ್ಕಳ ಚಲನ ಚಿತ್ರೋತ್ಸವ ಸಮಾರಂಭಗಳಲ್ಲಿ ಭಾಗವಹಿಸುವ ಮಂತ್ರಿಗಳು ಮತ್ತು ಹಿರಿಯ ಅಧಿಕಾರಿಗಳು ಇಂತಹ ಮಾತುಗಳನ್ನು ಪ್ರತಿ ವರ್ಷವೂ ಆಡುತ್ತ ಬಂದಿದ್ದಾರೆ. ಆದರೆ ಮಕ್ಕಳ ಸಿನಿಮಾಗಳ ಸಂಖ್ಯೆ ಮತ್ತು ಗುಣಮಟ್ಟ ಹೆಚ್ಚಾಗಿಲ್ಲ. ರಾಜ್ಯ ಸರ್ಕಾರ ಪ್ರತಿವರ್ಷ ಎರಡು  ಉತ್ತಮ ಮಕ್ಕಳ ಸಿನಿಮಾಗಳಿಗೆ ತಲಾ ಇಪ್ಪತ್ತೈದು ಲಕ್ಷ ರೂಪಾಯಿ ಸಹಾಯ ಧನ ನೀಡುವ ಯೋಜನೆ ಆರಂಭಿಸಿದ ಬಳಿಕ ಮಕ್ಕಳ ಚಿತ್ರಗಳ ನಿರ್ಮಾಣ ಸ್ವಲ್ಪ ಹೆಚ್ಚಾಗಿದೆ. ಆದರೆ ಸಹಾಯ ಧನಕ್ಕಾಗಿ ಮಕ್ಕಳ ಚಿತ್ರಗಳನ್ನು ತಯಾರಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಈ ಚಿತ್ರಗಳೆಲ್ಲ ಮಕ್ಕಳಿಗೆ ಇಷ್ಟವಾಗುತ್ತವೆ ಎನ್ನಲಾಗದು. ಹೀಗಾಗಿ ಮಕ್ಕಳು ಮನರಂಜನೆಗಾಗಿ ಟಿ.ವಿ ಚಾನೆಲ್‌ಗಳ ಕಾರ್ಟೂನ್ ಕಾರ್ಯಕ್ರಮಗಳನ್ನೇ ನೆಚ್ಚಿಕೊಂಡಿದ್ದಾರೆ.

ನಮ್ಮ ದೇಶದಲ್ಲಿ ಸಿನಿಮಾ ವಯಸ್ಕರ ಮನರಂಜನೆಯ ಮಾಧ್ಯಮ ಎನ್ನುವಂತಾಗಿದೆ. ಟೀವಿ ಚಾನೆಲ್‌ಗಳಿಂದಾಗಿ ಚಿತ್ರಮಂದಿರಗಳಿಗೆ ಬಂದು ಸಿನಿಮಾ ನೋಡುವವರ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಗಣನೀಯವಾಗಿ ಕಡಿಮೆಯಾಗಿದೆ. ಆದರೂ ಸಿನಿಮಾ ರಂಗ ಕೋಟ್ಯಂತರ ರೂಪಾಯಿ ಬಂಡವಾಳ ಬಯಸುವ ಉದ್ಯಮವಾಗಿ ಬೆಳೆದಿದೆ. ಅಲ್ಲಿ ಹಣ ಗಳಿಕೆಗೆ ಮೊದಲ ಆದ್ಯತೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳ ಮನೋವಿಕಾಸ ಹಾಗೂ ಮನರಂಜನೆಗಾಗಿ ಸಿನಿಮಾ ನಿರ್ಮಿಸುವವರು ಕಡಿಮೆ. ಸರ್ಕಾರ ಇನ್ನಷ್ಟು ಆರ್ಥಿಕ ಉತ್ತೇಜನ ನೀಡಿದರೆ ಮಕ್ಕಳ ಸಿನಿಮಾಗಳ ಸಂಖ್ಯೆ ಹೆಚ್ಚಬಹುದು. ಆದರೆ ಇಂತಹ ಸಿನಿಮಾಗಳು ಮಕ್ಕಳಿಗೆ ಇಷ್ಟವಾಗುತ್ತವೆ ಎಂಬ ಭರವಸೆ ಇಲ್ಲ. ಸರ್ಕಾರ ಮಕ್ಕಳ ಸಿನಿಮಾಗಳಿಗೆ ಆರ್ಥಿಕ ನೆರವು ಕೊಟ್ಟರೆ ಸಾಲದು. ಗುಣಮಟ್ಟದ ಸಿನಿಮಾಗಳ ತಯಾರಿಕೆಗೂ ಗಮನ ಕೊಡಬೇಕು. ಇಂತಹ ಸಿನಿಮಾಗಳನ್ನು ರಾಜ್ಯದ ಎಲ್ಲಾ ಮಕ್ಕಳೂ ನೋಡುವಂತಹ ಪ್ರದರ್ಶನ ವ್ಯವಸ್ಥೆಗೂ ಗಮನ ಕೊಡಬೇಕು.

ಕನ್ನಡ ಸಿನಿಮಾ ಉದ್ಯಮ ಈಗ ಸಂಕಷ್ಟದಲ್ಲಿದೆ. ಸಿನಿಮಾಗಳ ಮೇಲೆ ಹೂಡಿದ ಬಂಡವಾಳ ಹಿಂದಕ್ಕೆ ಬರುತ್ತಿಲ್ಲ. ಪರಭಾಷೆಯ ಸಿನಿಮಾಗಳ ಪೈಪೋಟಿ ಎದುರಿಸಿ ಕನ್ನಡ ಸಿನಿಮಾಗಳು ಯಶಸ್ವಿಯಾಗುವುದು ಕಷ್ಟ. ಶೇ.ಹತ್ತರಷ್ಟು ಸಿನಿಮಾಗಳೂ ಗಳಿಕೆ ದೃಷ್ಟಿಯಿಂದ ಯಶಸ್ವಿಯಾಗುತ್ತಿಲ್ಲ. ಒಂದು ಸಿನಿಮಾ ಯಶಸ್ವಿಯಾದರೆ ಮರುದಿನವೇ ಅದರ ಸೀಡಿ ಹಾಗೂ ಡೀವಿಡಿಗಳು ಬೀದಿ ಬೀದಿಗಳಲ್ಲಿ ಸಿಗುತ್ತವೆ. ಇಂತಹ ಪರಿಸ್ಥಿತಿಯಲ್ಲಿ  ಮಕ್ಕಳಿಗಾಗಿಯೇ ಸಿನಿಮಾ ಮಾಡುವುದು ಸಾಹಸವೇ ಸರಿ.

ರಾಜ್ಯ ಸರ್ಕಾರ ಹೊಸ ಸಿನಿಮಾ ನೀತಿ ಪ್ರಕಟಿಸುವ ಸಿದ್ಧತೆಯಲ್ಲಿದೆ. ಮಕ್ಕಳ ಸಿನಿಮಾಗಳ ನಿರ್ಮಾಣಕ್ಕೆ ಸಹಾಯಧನ, ರಾಷ್ಟ್ರ ಪ್ರಶಸ್ತಿ ವಿಜೇತ ಮಕ್ಕಳ ಚಿತ್ರಗಳಿಗೆ ಕೊಡುವ ಬಹುಮಾನದ ಮೊತ್ತ ಹೆಚ್ಚಿಸುವ ಪ್ರಸ್ತಾವಗಳು ಸ್ವಾಗತಾರ್ಹ. ಅದಕ್ಕಿಂತ ಮುಖ್ಯವಾಗಿ ಗುಣಮಟ್ಟದ ಮಕ್ಕಳ ಸಿನಿಮಾಗಳ ನಿರ್ಮಾಣಕ್ಕೆ ಏನು ಮಾಡಬೇಕು ಎಂಬ ಬಗ್ಗೆ ಸರ್ಕಾರ ಆಲೋಚಿಸಬೇಕು. ತಯಾರಾದ ಚಿತ್ರಗಳನ್ನು ರಾಜ್ಯದ ಎಲ್ಲ ಮಕ್ಕಳೂ ನೋಡುವಂತಾಗಬೇಕು. ದುರದೃಷ್ಟದ ಸಂಗತಿ ಎಂದರೆ  ಈಗ ಅನಿಮೇಷನ್ ಚಿತ್ರಗಳನ್ನು ತಯಾರಿಸಲು ನೆರೆ ರಾಜ್ಯಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ಇದೆ. ಮಕ್ಕಳ ಸಿನಿಮಾಗಳ ಮಾತು ಹಾಗಿರಲಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ 'ಪ್ರಶಸ್ತಿ' ಪಡೆದ ಪರ್ಯಾಯ ಸಿನಿಮಾಗಳನ್ನು ನೋಡುವ ಅವಕಾಶವೂ ಜನರಿಗಿಲ್ಲ. ಚಿತ್ರ ಮಂದಿರಗಳನ್ನು ಬಾಡಿಗೆಗೆ ಪಡೆದು ಪ್ರದರ್ಶನ ಮಾಡುವ ಶಕ್ತಿ ಈ ಸಿನಿಮಾಗಳ ನಿರ್ಮಾಪಕರಿಗಿಲ್ಲ. ಇನ್ನು ಮಕ್ಕಳ ಸಿನಿಮಾಗಳ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿರಲಾರದು.

ನಮ್ಮ ದೇಶಕ್ಕೆ ಹೋಲಿಸಿದರೆ ಇರಾನ್, ಚೀನಾ ದೇಶಗಳಲ್ಲಿ ಮಕ್ಕಳ ಕೇಂದ್ರಿತ ಸಿನಿಮಾಗಳು ಹೆಚ್ಚಿನ  ಸಂಖ್ಯೆಯಲ್ಲಿ ತಯಾರಾಗುತ್ತವೆ. ಅಂತಹ ಚಿತ್ರಗಳಿಗೆ ಆ ದೇಶಗಳ ಜನರು ಸೂಕ್ತವಾಗಿ ಸ್ಪಂದಿಸುತ್ತಾರೆ. ನಮ್ಮಲ್ಲೂ ಅಂತಹ ಸ್ಪಂದನೆ ಸಿಗಬೇಕು. ಸಿನಿಮಾ ಪ್ರಭಾವಶಾಲಿ ಮಾಧ್ಯಮ. ಮಕ್ಕಳಲ್ಲಿ ಸಕಾರಾತ್ಮಕ ಆಸಕ್ತಿ, ಅಭಿರುಚಿಗಳನ್ನು ಹೆಚ್ಚಿಸಲು ಈ ಮಾಧ್ಯಮವನ್ನು ಬಳಸಿಕೊಳ್ಳಲು ಸಾಧ್ಯವಿದೆ. ಆರ್ಥಿಕ ನೆರವು ಕೊಟ್ಟರೆ ಉತ್ತಮ ಚಿತ್ರಗಳು ನಿರ್ಮಾಣವಾಗುತ್ತವೆ ಎನ್ನುವ ಧೋರಣೆಯನ್ನು ಸರ್ಕಾರ ಬಿಡಬೇಕು. ಗುಣಮಟ್ಟದ ಮಕ್ಕಳ ಚಿತ್ರಗಳ ನಿರ್ಮಾಣಕ್ಕೆ ಏನು ಮಾಡಬೇಕು ಎಂಬ ಬಗ್ಗೆ ಸರ್ಕಾರ ಮತ್ತು ಚಿತ್ರೋದ್ಯಮದ ಮುಖಂಡರು ಚರ್ಚಿಸಿ ಸೂಕ್ತ ಯೋಜನೆ ರೂಪಿಸಬೇಕು.

■ ಪಿ.ಕೆ. ಹರಿಯಬ್ಬೆ

ಕನ್ನಡ ಸಿನಿಮಾ ಉದ್ಯಮ ಈಗ ಸಂಕಷ್ಟದಲ್ಲಿದೆ. ಸಿನಿಮಾಗಳ ಮೇಲೆ ಹೂಡಿದ ಬಂಡವಾಳ ಹಿಂದಕ್ಕೆ ಬರುತ್ತಿಲ್ಲ. ಪರಭಾಷೆಯ ಸಿನಿಮಾಗಳ ಪೈಪೋಟಿ ಎದುರಿಸಿ ಕನ್ನಡ ಸಿನಿಮಾಗಳು ಯಶಸ್ವಿಯಾಗುವುದು ಕಷ್ಟ. ಶೇ.ಹತ್ತರಷ್ಟು ಸಿನಿಮಾಗಳೂ ಗಳಿಕೆ ದೃಷ್ಟಿಯಿಂದ ಯಶಸ್ವಿಯಾಗುತ್ತಿಲ್ಲ. ಒಂದು ಸಿನಿಮಾ ಯಶಸ್ವಿಯಾದರೆ ಮರುದಿನವೇ ಅದರ ಸೀಡಿ ಹಾಗೂ ಡೀವಿಡಿಗಳು ಬೀದಿ ಬೀದಿಗಳಲ್ಲಿ ಸಿಗುತ್ತವೆ. ಇಂತಹ ಪರಿಸ್ಥಿತಿಯಲ್ಲಿ  ಮಕ್ಕಳಿಗಾಗಿಯೇ ಸಿನಿಮಾ ಮಾಡುವುದು ಸಾಹಸವೇ ಸರಿ.



ಸಾಂಗಳೇಕರ್